06/1

# 2006

## COMMERCE AND ACCOUNTANCY

### Paper 1

*Time : 3 Hours ]* *[ Maximum Marks : 300*

SEAL

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* ***three*** *questions in Part D.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

4×5=20

*Answer each question in about 50 words. Each question carries 5 marks.*

1. (a) What is "Job Costing" ?

   (b) Explain the purpose of "Standard Deduction" in Income Tax.

   (c) What is a "Holding Company" ?

   (d) Distinguish "Vouching" from "Verification".

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) 'ಕೆಲಸ ವೆಚ್ಚ ನಿರ್ಣಯ' (ಜಾಬ್ ಕಾಸ್ಟಿಂಗ್) ಎಂದರೇನು ?

(ಬಿ) ಆದಾಯ ತೆರಿಗೆಯಲ್ಲಿ "ಶಿಷ್ಟ ಕಡಿತ"ದ ಉದ್ದೇಶವೇನು ? ವಿವರಿಸಿ.

(ಸಿ) 'ಧಾರಕ ಕಂಪನಿ' ಎಂದರೇನು ?

(ಡಿ) 'ರುಜುವಾತು ಮಾಡುವುದು' ಮತ್ತು 'ತಾಳೆ ನೋಡುವುದು' — ಇವುಗಳ ವ್ಯತ್ಯಾಸವನ್ನು ತಿಳಿಸಿ.

## PART B

*10×10=100*

*Answer each question in about 100 words. Each question carries 10 marks.*

**2.** A company purchased machinery on 1-1-2000 for a sum of Rs. 6,00,000. The retail price index on that date stood at 150. You are required to restate the value of the Machinery according to Current Purchasing Power (CPP) method on 31-12-2005, when the price index stood at 200.

**3.** H Ltd. acquires 3/4 of the share capital of S Ltd. on 31-12-2005, when the Balance Sheets of the two companies are as under :

**Balance Sheets as on 31-12-2005**

| Liabilities | H Ltd. Rs. | S Ltd. Rs. | Assets | H Ltd. Rs. | S Ltd. Rs. |
|---|---|---|---|---|---|
| Share Capital (in Rs. 10 shares) | 2,00,000 | 1,00,000 | Fixed Assets | 2,00,000 | 1,00,000 |
| General Reserve | 50,000 | 30,000 | Current Assets | 1,30,000 | 1,20,000 |
| Profit and Loss A/C | 30,000 | 20,000 | Shares in S Ltd. | 1,00,000 | — |
| 10% Debentures | 1,00,000 | 50,000 | | | |
| Sundry Creditors | 50,000 | 20,000 | | | |
| | 4,30,000 | 2,20,000 | | 4,30,000 | 2,20,000 |

You are required to calculate the Cost of Control and Minority Interest for H Ltd.

**4.** Mr. Nayak is in receipt of annual salary of Rs. 4,00,000. He is provided with furnished accommodation at Gurgaon. (The population is above 4,00,000) for which his employer pays a rent of Rs. 48,000 p.a. and deducts Rs. 2,000 p.m. from the employee's salary. The cost of furnishing the residence amounts to Rs. 60,000. Calculate the value of perquisites, if the house is occupied for 9 months only.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಒಂದು ಸಂಸ್ಥೆಯು 6,00,000 ರೂ.ಗಳಿಗೆ ದಿನಾಂಕ 1-1-2000 ದಂದು ಯಂತ್ರಸಾಮಗ್ರಿಯನ್ನು ಕೊಂಡುಕೊಂಡಿತು. ಆ ದಿನಾಂಕದಂದು ಚಿಲ್ಲರೆ ಬೆಲೆ ಸೂಚಿಯು 150 ರಲ್ಲಿ ನಿಂತಿತ್ತು. ದಿ. 31-12-2005 ರಲ್ಲಿ ಬೆಲೆಸೂಚಿಯು 200 ರಲ್ಲಿದ್ದಾಗ ಚಾಲ್ತಿ ಖರೀದಿ ಶಕ್ತಿಗೆ (CPP) ಅನುಗುಣವಾಗಿ ಈ ಯಂತ್ರಸಾಮಗ್ರಿಯ ಮೌಲ್ಯವೇನು ಎಂಬುದನ್ನು ಮತ್ತೆ ಲೆಕ್ಕಮಾಡಿ ತಿಳಿಸಿ.

**3.** 31-12-2005 ರಲ್ಲಿ H ಮತ್ತು S ಎಂಬ ಎರಡೂ ಕಂಪನಿಗಳ ಸಂತುಲನ ಪಟ್ಟಿಗಳು ಕೆಳಕಂಡಂತಿದ್ದಾಗ H ಲಿಮಿಟೆಡ್ ಸಂಸ್ಥೆಯು S ಲಿಮಿಟೆಡ್ ಸಂಸ್ಥೆಯ ಶೇರು ಬಂಡವಾಳದ 3/4 ಪಾಲನ್ನು ಪಡೆದುಕೊಂಡಿತು :

**ದಿನಾಂಕ 31-12-2005 ರಲ್ಲಿರುವಂತೆ ಸಂತುಲನಪಟ್ಟಿಗಳು**

| ಹೊಣೆಗಾರಿಕೆಗಳು | H ಲಿ. ರೂ. | S ಲಿ. ರೂ. | ಸ್ವತ್ತುಗಳು | H ಲಿ. ರೂ. | S ಲಿ. ರೂ. |
|---|---|---|---|---|---|
| ಶೇರು ಬಂಡವಾಳ (ರೂ. 10 ಬೆಲೆ ಶೇರುಗಳಲ್ಲಿ) | 2,00,000 | 1,00,000 | ಸ್ಥಿರ ಸ್ವತ್ತುಗಳು | 2,00,000 | 1,00,000 |
| ಸಾಮಾನ್ಯ ಮೀಸಲು | 50,000 | 30,000 | ಚಾಲ್ತಿ ಸ್ವತ್ತುಗಳು | 1,30,000 | 1,20,000 |
| ಲಾಭ ಮತ್ತು ನಷ್ಟದ ಲೆಕ್ಕ | 30,000 | 20,000 | S ಲಿ. ನಲ್ಲಿ ಶೇರುಗಳು | 1,00,000 | — |
| 10% ಸಾಲ ಪತ್ರಗಳು | 1,00,000 | 50,000 | | | |
| ಚಿಕ್ಕಪುಟ್ಟ ಸಾಲಿಗರು | 50,000 | 20,000 | | | |
| | 4,30,000 | 2,20,000 | | 4,30,000 | 2,20,000 |

ನೀವು H ಲಿ., ಗಾಗಿ ನಿಯಂತ್ರಣ ವೆಚ್ಚ ಮತ್ತು ಅಲ್ಪತಾ ಬಡ್ಡಿಯನ್ನು ಲೆಕ್ಕ ಹಾಕಬೇಕು.

**4.** ಶ್ರೀ ನಾಯಕ್ ಎಂಬುವವರು ವಾರ್ಷಿಕ 4,00,000 ರೂ. ವೇತನ ಪಡೆಯುತ್ತಿದ್ದಾರೆ ಅವರಿಗೆ ಗುರುಗಾಂವ್ ಎಂಬಲ್ಲಿ ಸುಸಜ್ಜಿತ ವಸತಿ ಸೌಲಭ್ಯವನ್ನು ಒದಗಿಸಲಾಗಿದೆ. (ಇಲ್ಲಿನ ಜನಸಂಖ್ಯೆ ಸುಮಾರು 4,00,000), ಇದಕ್ಕಾಗಿ ಇವರ ಉದ್ಯೋಗದಾತನು ವರ್ಷಕ್ಕೆ 48,000 ರೂ. ಬಾಡಿಗೆ ತೆರುತ್ತಾನೆ ಮತ್ತು ಉದ್ಯೋಗಿಯ ವೇತನದಿಂದ ಪ್ರತಿ ತಿಂಗಳೂ 2,000 ರೂ. ಗಳಂತೆ ಮುರಿದುಕೊಳ್ಳುತ್ತಾನೆ. ವಸತಿ ಸೌಲಭ್ಯ ಒದಗಿಸಿದ್ದರ ವೆಚ್ಚ 60,000 ರೂ.ಗಳಷ್ಟಾಗುತ್ತದೆ. ಈ ಮನೆಯನ್ನು ಕೇವಲ 9 ತಿಂಗಳಿಗಾಗಿ ವಾಸಕ್ಕೆ ಪಡೆದುಕೊಂಡಿದ್ದರೆ ಅನುಷಂಗಿಕ ಲಾಭದ ಮೌಲ್ಯವೆಷ್ಟು ? ಲೆಕ್ಕಹಾಕಿ.

5. What are the types of Audit Opinion that are expressed in the Audit Report ? Illustrate a qualified opinion.

6. You are required to prepare the Profit and Loss Statement under Marginal Costing using the following data :
Total Units produced 1,000 Nos; Total Units Sold 800 Nos; Selling Price per unit Rs. 10; Total Fixed Overheads Rs. 3,000.
Cost Structure (Rs. per unit) :
Direct Material Rs. 2; Direct Wages Re. 1; Variable Overhead Rs. 2; Fixed Overhead Rs. 3.

7. The net profit, after making a provision of Rs. 3,30,000 for Income Tax of TATA Ltd. for the year ended 31-3-2005, amounts to Rs. 3,00,000. This figure of the net profit has been arrived at after taking into account the following items :

| | |
|---|---|
| Depreciation on fixed assets | Rs. 65,000 |
| Preliminary expenses written off | Rs. 7,000 |
| Bad debts | Rs. 1,000 |
| Loss on sale of furniture | Rs. 1,500 |
| Profit on sale of long-term investments | Rs. 5,000 |

Calculate Funds from Operations.

8. What are the functions of IDBI ?

9. Distinguish "Account Payee" cheque and "Bearer" cheque ?

10. What are the factors that must be considered while estimating working capital requirements ?

11. Distinguish 'Internal Rate of Return method' and 'Discounted Cash flow method' in Capital Budgeting.

**5.** ಒಂದು ಲೆಕ್ಕ ಪರಿಶೋಧಕರ ವರದಿಯಲ್ಲಿ ವ್ಯಕ್ತಪಡಿಸಲಾಗುವ ಲೆಕ್ಕ ಪರಿಶೋಧಕರ ಅಭಿಪ್ರಾಯದಲ್ಲಿ ಏನೇನು ಬಗೆಗಳಿವೆ ? ಒಂದು ಅರ್ಹ ಅಭಿಪ್ರಾಯವನ್ನು ವಿವರಿಸಿ.

**6.** ಕೆಳಗಿನ ದತ್ತಾಂಶವನ್ನು ಬಳಸಿ ನೀವು ಮಾರ್ಜಿನಲ್ ವೆಚ್ಚ ನಿರ್ಣಯದ ಪ್ರಕಾರ ಒಂದು ಲಾಭ ಮತ್ತು ನಷ್ಟದ ಲೆಕ್ಕವನ್ನು ಸಿದ್ಧಪಡಿಸಬೇಕಿದೆ :

ಉತ್ಪಾದಿಸಲಾದ ಒಟ್ಟು ಏಕಮಾನಗಳು 1,000; ಮಾರಾಟಮಾಡಿದ ಒಟ್ಟು ಏಕಮಾನಗಳು 800; ಪ್ರತಿ ಏಕಮಾನದ ಮಾರಾಟ ಬೆಲೆ 10/- ರೂ.; ಒಟ್ಟು ನಿಶ್ಚಿತ ಮೇಲ್ವೆಚ್ಚಗಳು 3,000 ರೂ.;

ವೆಚ್ಚ ರಚನೆ (ಪ್ರತಿ ಏಕಮಾನಕ್ಕೆ ರೂ. :

ಪ್ರತ್ಯಕ್ಷ ಸಾಮಗ್ರಿ 2 ರೂ.; ಪ್ರತ್ಯಕ್ಷ ಮಜೂರಿ 1 ರೂ.; ವ್ಯತ್ಯಾಸಿ ಮೇಲ್ವೆಚ್ಚ 2 ರೂ.; ನಿಶ್ಚಿತ ಮೇಲ್ವೆಚ್ಚ 3 ರೂ.

**7.** ಟಾಟಾ ಲಿಮಿಟೆಡ್‌ನವರು 31-3-2005 ರಂದು ಕೊನೆಗೊಂಡ ವರ್ಷಕ್ಕಾಗಿ 3,30,000 ರೂ. ಗಳ ಆದಾಯ ತೆರಿಗೆಗೆ ಅವಕಾಶ ಮಾಡಿಕೊಟ್ಟನಂತರ, ಅವರ ನಿವ್ವಳ ಲಾಭ 3,00,000 ರೂ. ಆಗಿತ್ತು. ಕೆಳಕಂಡ ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡನಂತರ ನಿವ್ವಳ ಲಾಭದ ಈ ಅಂಕಿಯನ್ನು ನಿರ್ಣಯಿಸಲಾಗಿದೆ :

| | |
|---|---|
| ಸ್ಥಿರಸ್ವತ್ತುಗಳ ಮೇಲಿನ ಸವಕಳಿ | 65,000 ರೂ. |
| ಮನ್ನಾಮಾಡಿದ ಪ್ರಾಥಮಿಕ ವೆಚ್ಚಗಳು | 7,000 ರೂ. |
| ವಸೂಲಾಗದ ಸಾಲಗಳು | 1,000 ರೂ. |
| ಪೀಠೋಪಕರಣ ಮಾರಾಟದ ನಷ್ಟ | 1,500 ರೂ. |
| ದೀರ್ಘಾವಧಿ ಹೂಡಿಕೆಗಳ ಮಾರಾಟದ ಲಾಭ | 5,000 ರೂ. |

ಕಾರ್ಯಾಚರಣೆಗಳಿಂದ ಬಂದ ಹಣವನ್ನು ಲೆಕ್ಕಹಾಕಿ.

**8.** ಐ.ಡಿ.ಬಿ.ಐ. (IDBI) ನ ಪ್ರಕಾರ್ಯಗಳೇನು ?

**9.** "ಖಾತೆಗೆ ಸಂದಾಯ ಚೆಕ್" ಮತ್ತು "ಧಾರಕರ ಚೆಕ್" ಇವೆರಡರ ವ್ಯತ್ಯಾಸವನ್ನು ತಿಳಿಸಿ.

**10.** ಕಾರ್ಯ ಬಂಡವಾಳದ ಅಗತ್ಯತೆಗಳನ್ನು ಅಂದಾಜುಮಾಡುವಾಗ ಯಾವಯಾವ ಅಂಶಗಳನ್ನು ಪರಿಗಣಿಸಬೇಕು ?

**11.** ಬಂಡವಾಳ ಬಜೆಟ್ ರಚನೆಯಲ್ಲಿ 'ಹುಟ್ಟುವಳಿಯ ಆಂತರಿಕ ದರ ವಿಧಾನ' ಮತ್ತು 'ರಿಯಾಯಿತಿ ನೀಡಿದ ನಗದು ಹರಿವಿನ ವಿಧಾನ'ಕ್ಕೆ ಇರುವ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿ.

[Turn over

## PART C

*6×15=90*

*Answer each question in about 150 words. Each question carries 15 marks.*

**12.** The Balance Sheet of Tit for Tat Company Ltd. discloses the following financial position as on 31st March, 2005 :

| Liabilities | Rs. | Assets | | Rs. |
|---|---|---|---|---|
| Paid-up Capital : | 3,00,000 | Goodwill at cost | | 30,000 |
| 30,000 shares of | | Land and buildings at cost | | |
| Rs. 10 each, fully paid | | (Less : Depreciation) | | 1,75,000 |
| Capital Reserve | 60,000 | Plant and Machinery at cost | | |
| Sundry Creditors | 71,000 | (Less Depreciation) | | 90,000 |
| Provision for Taxation | 55,000 | Stock at Cost | | 1,15,000 |
| Profit and Loss A/C | 26,000 | Book Debts | 98,000 | |
| | | Less : Provision for | | |
| | | Doubtful debts | 3,000 | 95,000 |
| | | Cash at Bank | | 7,000 |
| | 5,12,000 | | | 5,12,000 |

You are asked to value the goodwill of Tit for Tat Company Ltd., for which purpose, the following information is provided :

(a) Adequate provision has been made in the accounts for Income tax and depreciation.

(b) Rate of Income tax may be taken at 50%. Profit, during the year, may be assumed at Rs. 55,000.

(c) The average rate of dividend declared by the company for the past five years was 15 percent.

(d) The reasonable return on capital invested in the class of business done by the company is 12 percent.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಟಿಟ್ ಫಾರ್ ಟ್ಯಾಟ್ ಕಂಪನಿ ಲಿ. ನ ಸಂತುಲನ ಪಟ್ಟಿಯು 31 ಮಾರ್ಚ್ 2005 ರಂದು ಇರುವಂತೆ ಕೆಳಕಂಡ ಹಣಕಾಸು ಸ್ಥಿತಿಯನ್ನು ತೋರಿಸುತ್ತದೆ :

| ಹೊಣೆಗಾರಿಕೆಗಳು | ರೂ. | ಸ್ವತ್ತುಗಳು | | ರೂ. |
|---|---|---|---|---|
| ಸಂದಾಯವಾದ ಬಂಡವಾಳ : ಪ್ರತಿ 10 ರೂ. ಗಳ ಪೂರ್ಣ ಸಂದಾಯವಾದ 30,000 ಶೇರುಗಳು | 3,00,000 | ವೆಚ್ಚದಲ್ಲಿ ಸುನಾಮ | | 30,000 |
| ಬಂಡವಾಳ ಮೀಸಲು | 60,000 | ಭೂಮಿ ಮತ್ತು ಕಟ್ಟಡ ವೆಚ್ಚದಲ್ಲಿ (ಕಳೆಯಿರಿ : ಸವಕಳಿ) | | 1,75,000 |
| ಚಿಕ್ಕ ಪುಟ್ಟ ಸಾಲಿಗರು | 71,000 | ಸ್ಥಾವರ ಮತ್ತು ಯಂತ್ರಸಾಮಗ್ರಿ ವೆಚ್ಚದಲ್ಲಿ (ಕಳೆಯಿರಿ : ಸವಕಳಿ) | | 90,000 |
| ತೆರಿಗೆ ನಿರ್ಧಾರಣಕ್ಕೆ ಅವಕಾಶ | 55,000 | ದಾಸ್ತಾನು (ವೆಚ್ಚದಲ್ಲಿ) | | 1,15,000 |
| ಲಾಭ ಮತ್ತು ನಷ್ಟದ ಲೆಕ್ಕ | 26,000 | ಪುಸ್ತಕ ಸಾಲಗಳು | 98,000 | |
| | | ಕಳೆಯಿರಿ : ಸಂದೇಹಾಸ್ಪದ ಸಾಲಗಳಿಗೆ ಅವಕಾಶ | 3,000 | 95,000 |
| | | ಬ್ಯಾಂಕಿನಲ್ಲಿ ನಗದು | | 7,000 |
| | 5,12,000 | | | 5,12,000 |

ನೀವು ಟಿಟ್ ಫಾರ್ ಟ್ಯಾಟ್ ಕಂಪನಿಯ ಸುನಾಮದ ಮೌಲ್ಯವನ್ನು ನಿರ್ಧರಿಸಬೇಕಿದೆ. ಇದಕ್ಕಾಗಿ ಕೆಳಕಂಡ ಮಾಹಿತಿಯನ್ನು ನೀಡಲಾಗಿದೆ :

(ಎ) ಆದಾಯ ತೆರಿಗೆ ಮತ್ತು ಸವಕಳಿಗಾಗಿ ಲೆಕ್ಕ ಪತ್ರಗಳಲ್ಲಿ ಸಾಕಷ್ಟು ಅವಕಾಶವನ್ನು ಮಾಡಲಾಗಿದೆ.

(ಬಿ) ಆದಾಯ ತೆರಿಗೆಯ ದರವನ್ನು 50% ರಂತೆ ಪರಿಗಣಿಸಬಹುದು. ವರ್ಷದಲ್ಲಿನ ಲಾಭವನ್ನು 55,000 ರೂ. ಎಂದು ಭಾವಿಸಿಕೊಳ್ಳಬಹುದು.

(ಸಿ) ಹಿಂದಿನ ಐದು ವರ್ಷಗಳಿಗಾಗಿ ಕಂಪನಿಯು 15% ರಂತೆ ಸರಾಸರಿ ದರದಲ್ಲಿ ಲಾಭಾಂಶವನ್ನು ಘೋಷಿಸಿದೆ.

(ಡಿ) ಸಂಸ್ಥೆಯು ವ್ಯವಹಾರ ನಡೆಸುತ್ತಿರುವ ವರ್ಗದಲ್ಲಿ ಹೂಡಲಾಗಿರುವ ಬಂಡವಾಳಕ್ಕೆ ಸೂಕ್ತ ಆದಾಯ 12%.

**13.** The following is the Balance Sheet of H Ltd., and its subsidiary S Ltd., as on 31st December 2005 :

**Balance Sheet as on 31st December 2005**

| Liabilities | Rs. | Rs. | Assets | Rs. | Rs. |
|---|---|---|---|---|---|
| Share Capital in Re. 1 shares | 10,000 | 8,000 | Buildings | 4,000 | — |
| Reserves | 4,000 | 3,000 | Plant | 1,000 | 6,000 |
| Bills Payable | 2,000 | 1,000 | Stock | 4,000 | 6,000 |
| Creditors | 5,000 | 4,000 | Shares in S | 6,000 | — |
| Profit and Loss A/c | 4,000 | 2,000 | Debtors | 5,000 | 3,000 |
| | | | Bills Receivable | 3,000 | 2,000 |
| | | | Cash | 2,000 | 1,000 |
| | 25,000 | 18,000 | | 25,000 | 18,000 |

Debtors of H Ltd. include Rs. 2,000 due from S Ltd. and bills payable of H Ltd. includes a bill of Rs. 500 accepted in favour of S Ltd. A loan of Rs. 1,000, given by H Ltd. to S Ltd., is also included in the items of debtors and creditors, respectively. Rs. 500 is transferred by S Ltd. from Profit and Loss account to Reserve out of current year's profits. Shares were purchased on 30th June 2005 at par. Prepare a Consolidated Balance Sheet.

**14.** Y & Co. is engaged in the manufacture and sale of a product called "*Akai*". Its budget for the next year shows the following :

Selling Price Rs. 10

Variable Cost per unit Rs. 5

Fixed Cost Rs. 40,000

Demand 10,000 units

**13.** 2005 ರ ಡಿಸೆಂಬರ್ 31 ರಲ್ಲಿರುವಂತೆ H ಲಿ. ಮತ್ತು ಅದರ ಅಧೀನ ಕಂಪನಿ S ಲಿ. ನ ಸಂತುಲನ ಪಟ್ಟಿಗಳು ಕೆಳಕಂಡಂತಿವೆ :

**2005, ಡಿಸೆಂಬರ್ 31 ರಲ್ಲಿರುವಂತೆ ಸಂಕಲನ ಪಟ್ಟಿಗಳು**

| ಹೊಣೆಗಾರಿಕೆಗಳು | ರೂ. | ರೂ. | ಸ್ವತ್ತುಗಳು | ರೂ. | ರೂ. |
|---|---|---|---|---|---|
| 1 ರೂ. ಶೇರಿನಲ್ಲಿ ಶೇರು ಬಂಡವಾಳ | 10,000 | 8,000 | ಕಟ್ಟಡಗಳು | 4,000 | — |
| ಮೀಸಲುಗಳು | 4,000 | 3,000 | ಸ್ಥಾವರ | 1,000 | 6,000 |
| ಸಂದಾಯ ಮಾಡಬೇಕಾದ ಬಿಲ್ಲುಗಳು | 2,000 | 1,000 | ದಾಸ್ತಾನು | 4,000 | 6,000 |
| ಸಾಲಿಗರು | 5,000 | 4,000 | S ನಲ್ಲಿ ಶೇರುಗಳು | 6,000 | — |
| ಲಾಭ ಮತ್ತು ನಷ್ಟದ ಲೆಕ್ಕ | 4,000 | 2,000 | ಋಣದಾತರು | 5,000 | 3,000 |
| | | | ಸ್ವೀಕರಿಸಬಹುದಾದ ಬಿಲ್ಲುಗಳು | 3,000 | 2,000 |
| | | | ನಗದು | 2,000 | 1,000 |
| | 25,000 | 18,000 | | 25,000 | 18,000 |

H ಲಿಮಿಟೆಡ್‌ನ ಋಣದಾತರಲ್ಲಿ S ಲಿಮಿಟೆಡ್‌ನಿಂದ ಬರಬೇಕಾದ 2,000 ರೂ. ಸೇರಿದೆ ಹಾಗೂ H ಲಿಮಿಟೆಡ್ ನಿಂದ ಸಂದಾಯವಾಗಬೇಕಾದ ಬಿಲ್ಲಿನಲ್ಲಿ S ಲಿಮಿಟೆಡ್ ಪರವಾಗಿ ಅಂಗೀಕರಿಸಿದ 500 ರೂ.ಗಳ ಬಿಲ್ ಸೇರಿದೆ. S ಲಿಮಿಟೆಡ್‌ಗೆ H ಲಿಮಿಟೆಡ್ ನೀಡಿದ 1,000 ರೂ. ಗಳ ಸಾಲವನ್ನು ಸಹ ಅನುಕ್ರಮವಾಗಿ ಋಣದಾತರು ಮತ್ತು ಸಾಲಿಗರ ಬಾಬುಗಳಲ್ಲಿ ಸೇರಿಸಿಕೊಳ್ಳಲಾಗಿದೆ. ಚಾಲ್ತಿ ವರ್ಷದ ಲಾಭದ 500 ರೂ.ಗಳನ್ನು S ಲಿಮಿಟೆಡ್ ಲಾಭ ಮತ್ತು ನಷ್ಟದ ಬಾಕಿಯಿಂದ ಮೀಸಲಿಗೆ ವರ್ಗಾಯಿಸಿದೆ. ಶೇರುಗಳನ್ನು ನಮೂದು ಬೆಲೆಯಲ್ಲಿ 2005 ರ ಜೂನ್ 30 ರಂದು ಖರೀದಿಸಲಾಗಿದೆ. ಇದರ ಕ್ರೋಢೀಕೃತ ಸಂತುಲನ ಪಟ್ಟಿಯನ್ನು ಸಿದ್ಧಪಡಿಸಿ.

**14.** Y & Co., "ಆಕಾಯಿ" ಎಂಬ ಉತ್ಪನ್ನದ ತಯಾರಿಕೆ ಹಾಗೂ ಮಾರಾಟದಲ್ಲಿ ತೊಡಗಿದೆ. ಮುಂದಿನ ವರ್ಷಕ್ಕಾಗಿ ಅವರ ಬಜೆಟ್ ಕೆಳಕಂಡ ಅಂಶಗಳನ್ನು ತೋರಿಸುತ್ತಿದೆ :

ಮಾರಾಟ ಬೆಲೆ 10 ರೂ.

ಪ್ರತಿ ಏಕಮಾನದ ವ್ಯತ್ಯಾಸಿ ವೆಚ್ಚ 5 ರೂ.

ಸ್ಥಿರ ವೆಚ್ಚ 40,000 ರೂ.

ಬೇಡಿಕೆ 10,000 ಏಕಮಾನಗಳು

It wants to diversify into product "*Blue Star*" in order to reduce its market risks and its corporate planning department has estimated the following for the new product :

Selling price Rs. 12
Variable Cost per unit Rs. 6
Fixed Cost Rs. 18,000
Demand 4,000 units

You are required to suggest whether diversification is advisable for the firm.

**15.** A Company is considering the following investment projects :

| Projects | Cash Flows (Rs.) | | | |
|---|---|---|---|---|
| | C0 | C1 | C2 | C3 |
| A | — 10,000 | + 10,000 | | |
| B | — 10,000 | + 7,500 | + 7,500 | |
| C | — 10,000 | + 2,000 | + 4,000 | + 12,000 |
| D | — 10,000 | + 10,000 | + 3,000 | + 3,000 |

(a) Rank the project according to each of the following methods :

(i) Pay Back

(ii) NPV, assuming discount rates of 10 and 30 percent

(b) Assuming the projects are independent, which one should be accepted ? If the projects are mutually exclusive, which project is the best ?

NPV for Re. 1 for interest rates 10% and 30% for 3 years respectively are as follows :

| Year | 10% | 30% |
|---|---|---|
| End of $1^{st}$ year | 0·909 | 0·769 |
| End of $2^{nd}$ year | 0·826 | 0·592 |
| End of $3^{rd}$ year | 0·751 | 0·455 |

ಮಾರುಕಟ್ಟೆಯ ತೊಂದರೆ ಸಾಧ್ಯತೆಗಳನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಅದು "ಬ್ಲೂ ಸ್ಟಾರ್" ಎಂಬ ಉತ್ಪನ್ನ ವೈವಿಧ್ಯವನ್ನು ತಯಾರಿಸಲು ಬಯಸಿದೆ, ಹೊಸ ಉತ್ಪನ್ನಕ್ಕಾಗಿ ಈ ಸಂಸ್ಥೆಯ ಕಾರ್ಪೊರೇಟ್ ಯೋಜನಾ ಇಲಾಖೆಯು ಕೆಳಕಂಡ ಅಂದಾಜುಗಳನ್ನು ನೀಡಿದೆ :

ಮಾರಾಟ ಬೆಲೆ 12 ರೂ.

ಪ್ರತಿ ಏಕಮಾನದ ವ್ಯತ್ಯಾಸಿ ವೆಚ್ಚ 6 ರೂ.

ಸ್ಥಿರ ವೆಚ್ಚ 18,000 ರೂ.

ಬೇಡಿಕೆ 4,000 ಏಕಮಾನಗಳು

ಈ ಉದ್ಯಮವು ವೈವಿಧ್ಯೀಕರಣ ಪ್ರಯತ್ನಕ್ಕೆ ತೊಡಗುವುದು ಉಚಿತವೆ ಎಂಬ ಬಗ್ಗೆ ನಿಮ್ಮ ಸಲಹೆ ಕೊಡಬೇಕಾಗಿದೆ.

**15.** ಒಂದು ಸಂಸ್ಥೆಯು ಕೆಳಕಂಡ ಹೂಡಿಕೆ ಪರಿಯೋಜನೆಯ ಬಗ್ಗೆ ಆಲೋಚಿಸುತ್ತಿದೆ :

| ಪರಿಯೋಜನೆಗಳು | ನಗದು ಅಗಮನ (ರೂ.) | | | |
|---|---|---|---|---|
| | C0 | C1 | C2 | C3 |
| A | — 10,000 | + 10,000 | | |
| B | — 10,000 | + 7,500 | + 7,500 | |
| C | — 10,000 | + 2,000 | + 4,000 | + 12,000 |
| D | — 10,000 | + 10,000 | + 3,000 | + 3,000 |

(ಎ) ಕೆಳಕಂಡ ಪ್ರತಿಯೊಂದು ವಿಧಾನದ ಪ್ರಕಾರವಾಗಿ ಪರಿಯೋಜನೆಯ ಶ್ರೇಣಿಯನ್ನು ತಿಳಿಸಿ :

(i) ವಾಪಸು ಸಂದಾಯ

(ii) NPV, ಶೇ 10 ಮತ್ತು 30 ರ ರಿಯಾಯಿತಿ ದರಗಳನ್ನು ಭಾವಿಸಿಕೊಂಡು

(ಬಿ) ಈ ಪರಿಯೋಜನೆಗಳು 'ಸ್ವತಂತ್ರ' ಎಂದು ಭಾವಿಸಿದರೆ ಇದರಲ್ಲಿ ಯಾವುದನ್ನು ಸಮ್ಮತಿಸಬೇಕು ? ಅವು ಒಂದನ್ನೊಂದು, ಅವಲಂಬಿಸದೆ ಪ್ರತ್ಯೇಕ ಎಂದಾದರೆ, ಇದರಲ್ಲಿ ಯಾವುದು ಅತ್ಯುತ್ತಮ ?

10% ಮತ್ತು 30% ಬಡ್ಡಿ ದರಗಳಿಗೆ 3 ವರ್ಷಗಳಿಗಾಗಿ 1 ರೂ.ಗೆ NPV ಯು ಅನುಕ್ರಮವಾಗಿ ಕೆಳಕಂಡಂತಿದೆ :

| ವರ್ಷ | 10% | 30% |
|---|---|---|
| ಮೊದಲನೇ ವರ್ಷದ ಕೊನೆ | 0·909 | 0·769 |
| ಎರಡನೇ ವರ್ಷದ ಕೊನೆ | 0·826 | 0·592 |
| ಮೂರನೇ ವರ್ಷದ ಕೊನೆ | 0·751 | 0·455 |

**16.** What changes in Prudential norms are suggested by the Narasimham Committee ? Comment on the impact of these norms on the functioning of nationalized RRBs in India.

**17.** When can a cheque be dishonoured by a Bank ? When should a Bank dishonour a cheque ?

[Turn over

**16.** ವಿವೇಚನಾ ಮಾನಕಗಳಲ್ಲಿ ನರಸಿಂಹಂ ಸಮಿತಿಯು ಯಾವ ಬದಲಾವಣೆಗಳನ್ನು ಸೂಚಿಸಿದೆ ? ಭಾರತದ ರಾಷ್ಟ್ರೀಕೃತ RRB ಗಳ ಕಾರ್ಯ ನಿರ್ವಹಣೆಯ ಮೇಲೆ ಈ ಮಾನಕಗಳ ಪರಿಣಾಮವೇನು ಎಂಬುದನ್ನು ತಿಳಿಸಿ.

**17.** ಒಂದು ಬ್ಯಾಂಕು, ಚೆಕ್ಕನ್ನು ಯಾವಾಗ ತಿರಸ್ಕರಿಸಬಹುದು ? ಯಾವಾಗ ಬ್ಯಾಂಕು ಚೆಕ್ಕನ್ನು ತಿರಸ್ಕರಿಸಬೇಕು ?

## PART D

*3×30=90*

*Answer any **three** of the following questions, each in about 300 words. Each question carries 30 marks.*

**18.** At 100% capacity (1,00,000 hours), the monthly production overhead budget for a factory is as follows :

| | Rs. | Category |
|---|---|---|
| Salaries | 40,000 | C |
| Indirect Wages | 8,000 | B |
| Repairs and Maintenance | 5,000 | B |
| Consumable Stores | 4,000 | A |
| Miscellaneous | 5,000 | B |
| Spoilage | 2,000 | A |
| Fuel and Power | 15,000 | A |

The behaviour of various categories of expenses was as follows :

| Activity as a % of capacity | Multiplier applicable to budget | | |
|---|---|---|---|
| | Category A | Category B | Category C |
| 80 | 0·85 | 1·00 | 1·00 |
| 90 | 0·93 | 1·00 | 1·00 |
| 100 | 1·00 | 1·00 | 1·00 |
| 110 | 1·06 | 1·00 | 1·00 |
| 120 | 1·12 | 1·00 | 1·00 |
| 130 | 1·18 | 1·10 | 1·00 |
| 140 | 1·23 | 1·10 | 1·00 |
| 150 | 1·28 | 1·10 | 1·20 |

## ಭಾಗ D

*3×30=90*

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** 100% ಸಾಮರ್ಥ್ಯದಂತೆ (1,00,000 ಗಂಟೆಗಳು) ಒಂದು ಕಾರ್ಖಾನೆಯ ಮಾಸಿಕ ಉತ್ಪಾದನಾ ಮೇಲ್ವೆಚ್ಚದ ಬಜೆಟ್ ಕೆಳಕಂಡಂತಿದೆ :

| | ರೂ. | ಗುಂಪು |
|---|---|---|
| ವೇತನ | 40,000 | C |
| ಪರೋಕ್ಷ ಮಜೂರಿ | 8,000 | B |
| ರಿಪೇರಿಗಳು ಮತ್ತು ಆರೈಕೆ | 5,000 | B |
| ಬಳಕೆ ವಸ್ತುಗಳ ಉಗ್ರಾಣ | 4,000 | A |
| ಇತರೆ | 5,000 | B |
| ಹಾಳಾಗುವಿಕೆ | 2,000 | A |
| ಇಂಧನ ಮತ್ತು ವಿದ್ಯುತ್ | 15,000 | A |

ವಿವಿಧ ಗುಂಪಿನ ವೆಚ್ಚಗಳ ವರ್ತನೆ ಕೆಳಕಂಡಂತಿತ್ತು :

| ಸಾಮರ್ಥ್ಯದ % ಪ್ರಕಾರ ಕಾರ್ಯ ಚಟುವಟಿಕೆ | ಬಜೆಟ್‌ಗೆ ಅನ್ವಯಿಸುವ ಗುಣಿತಕಾರಿ | | |
|---|---|---|---|
| | ಗುಂಪು A | ಗುಂಪು B | ಗುಂಪು C |
| 80 | 0·85 | 1·00 | 1·00 |
| 90 | 0·93 | 1·00 | 1·00 |
| 100 | 1·00 | 1·00 | 1·00 |
| 110 | 1·06 | 1·00 | 1·00 |
| 120 | 1·12 | 1·00 | 1·00 |
| 130 | 1·18 | 1·10 | 1·00 |
| 140 | 1·23 | 1·10 | 1·00 |
| 150 | 1·28 | 1·10 | 1·20 |

There were three products and, in a month, the total production was expected to be :

| | |
|---|---|
| X | 10,000 units |
| Y | 15,000 units |
| Z | 5,000 units |

The standard hours per unit of the three products were agreed to be 5 for X, 4 for Y and 6 for Z. Prepare Production Overhead Budget for the concerned month.

**19.** The following is the Balance Sheet of A Ltd. :

| Liabilities | Rs. | Assets | Rs. |
|---|---|---|---|
| Share Capital (Rs. 10 Shares) | 10,000 | Fixed Assets | 8,000 |
| General Reserve | 5,000 | Current Assets | 12,000 |
| Sundry Creditors | 5,000 | | |
| | 20,000 | | 20,000 |

The business is taken over by B Ltd. for a sum of Rs. 30,000 to be satisfied by issue of shares of Rs. 10 each. The current assets of A Ltd. include goods of the value of Rs. 5,000, which was purchased by it from B Ltd., on which B Ltd. charged a profit of 25% on cost. The current assets of A Ltd. also include a debt of Rs. 2,000 due from B Ltd. to A Ltd. for goods purchased and which have now been completely sold by that company.

Prepare Realization Account and the Shareholders Account in the books of A Ltd. and pass necessary journal entries for the acquisition of the business in the books of B Ltd.

ಇಲ್ಲಿ ಮೂರು ಉತ್ಪನ್ನಗಳಿದ್ದು, ಒಂದು ತಿಂಗಳೊಳಗೆ ಒಟ್ಟು ಉತ್ಪಾದನೆಯನ್ನು ಕೆಳಕಂಡಂತೆ ನಿರೀಕ್ಷಿಸಲಾಗಿತ್ತು :

| | |
|---|---|
| X | 10,000 ಏಕಮಾನಗಳು |
| Y | 15,000 ಏಕಮಾನಗಳು |
| Z | 5,000 ಏಕಮಾನಗಳು |

ಈ ಮೂರೂ ಉತ್ಪನ್ನಗಳಿಗಾಗಿ ಪ್ರತಿ ಏಕಮಾನಕ್ಕೆ ಪ್ರಮಾಣಿಸಿದ ಗಂಟೆಗಳನ್ನು ಈ ರೀತಿ ಒಪ್ಪಿಕೊಳ್ಳಲಾಗಿತ್ತು; X ಗೆ 5, Y ಗೆ 4 ಮತ್ತು Z ಗೆ 6. ಸಂಬಂಧಪಟ್ಟ ತಿಂಗಳಿಗಾಗಿ ಉತ್ಪಾದನಾ ಮೇಲ್ವೆಚ್ಚ ಬಜೆಟ್ಟನ್ನು ಸಿದ್ಧಪಡಿಸಿ.

**19.** A ಲಿಮಿಟೆಡ್‌ನ ಸಂತುಲನ ಪಟ್ಟಿಯು ಕೆಳಕಂಡಂತಿದೆ :

| ಹೊಣೆಗಾರಿಕೆಗಳು | ರೂ. | ಸ್ವತ್ತುಗಳು | ರೂ. |
|---|---|---|---|
| ಶೇರು ಬಂಡವಾಳ (10 ರೂ. ಶೇರುಗಳು) | 10,000 | ಸ್ಥಿರ ಸ್ವತ್ತುಗಳು | 8,000 |
| ಸಾಮಾನ್ಯ ಮೀಸಲು | 5,000 | ಚಾಲ್ತಿ ಸ್ವತ್ತುಗಳು | 12,000 |
| ಚಿಕ್ಕಪುಟ್ಟ ಸಾಲಿಗರು | 5,000 | | |
| | 20,000 | | 20,000 |

ಈ ವ್ಯವಹಾರವನ್ನು 30,000 ರೂ. ಗಳಿಗೆ B ಲಿಮಿಟೆಡ್ ತೆಗೆದುಕೊಂಡಿದ್ದು, ಇದಕ್ಕಾಗಿ ಪ್ರತಿ 10 ರೂ.ಗಳ ಶೇರುಗಳನ್ನು ಕೊಡಲಾಗಿದೆ. A ಲಿಮಿಟೆಡ್ ಚಾಲ್ತಿ ಸ್ವತ್ತುಗಳು 5,000 ರೂ. ಮೌಲ್ಯದ ಸರಕುಗಳನ್ನೊಳಗೊಂಡಿದ್ದು ಇದನ್ನು ಈ ಸಂಸ್ಥೆಯಿಂದ B ಸಂಸ್ಥೆಯು ಖರೀದಿಸಿದೆ. ಇದಕ್ಕಾಗಿ B ಸಂಸ್ಥೆಯು ವೆಚ್ಚದ ಮೇಲೆ 25% ಲಾಭವನ್ನು ವಿಧಿಸಿದೆ. A ಲಿಮಿಟೆಡ್‌ನ ಚಾಲ್ತಿ ಸ್ವತ್ತುಗಳು 2,000 ರೂ. ಗಳ ಸಾಲವನ್ನು ಒಳಗೊಂಡಿದ್ದು ಇದನ್ನು ಸರಕುಗಳನ್ನು ಖರೀದಿಸಿದ್ದಕ್ಕಾಗಿ A ಲಿಮಿಟೆಡ್‌ಗೆ B ಲಿಮಿಟೆಡ್ ಕೊಡಬೇಕಾಗಿದೆ ಮತ್ತು ಸಂಸ್ಥೆಯಿಂದ ಇದು ಸಂಪೂರ್ಣ ಮಾರಾಟವಾಗಿಹೋಗಿದೆ.

A ಲಿಮಿಟೆಡ್‌ನ ಪುಸ್ತಕಗಳಲ್ಲಿ ನಗದೀಕರಣದ ಲೆಕ್ಕ ಹಾಗೂ ಶೇರುದಾರರ ಲೆಕ್ಕವನ್ನು ತಯಾರಿಸಿ ಮತ್ತು ವ್ಯವಹಾರ ಗಳಿಕೆಗೆ ಸಂಬಂಧಿಸಿದಂತೆ B ಲಿಮಿಟೆಡ್‌ನ ಪುಸ್ತಕಗಳಲ್ಲಿ ಅಗತ್ಯವಿರುವ ಜರ್ನಲ್ ನಮೂದುಗಳನ್ನು ಪಾಸು ಮಾಡಿ.

**20.** From the particulars given below, compute the amount of tax payable by Mr. Mahesh for the Assessment Year 2006 – 07 :

| | Rs. |
|---|---|
| Basic Pay | 1,80,000 |
| Dearness Allowance | 48,000 |
| City Compensatory Allowance | 2,880 |
| House Rent Allowance @ Rs. 6,000 p.m. | 72,000 |
| Rent paid at Chennai @ Rs. 7,000 p.m. | 84,000 |
| Life Insurance premium paid | 7,500 |
| Amount paid into Recognized Provident Fund | 8,000 |
| Amount paid into Public Provident Fund | 14,000 |
| Long-term Capital gains | 20,000 |
| Other Income | 12,000 |
| He paid tuition fee for his son and daughter, who are studying Engineering @ Rs. 22,000 each, | 44,000 |
| He paid Profession Tax @ Rs. 200 per month | 2,400 |

**21.** "Recent changes in prudential norms of RBI have helped the banks, but created challenges to the agriculturalists in rural India." — Comment.

**22.** What are the functions of all-India term financial institutions like IFCI, ICICI and IRCI ?

**20.** ಕೆಳಗೆ ಕೊಟ್ಟಿರುವ ವಿವರಗಳನ್ನು ಆಧರಿಸಿ 2006 – 07 ರ ಸಾಲಿಗಾಗಿ ಶ್ರೀ ಮಹೇಶ್ ಎಂಬುವವರು ಸಂದಾಯಮಾಡಬೇಕಾದ ತೆರಿಗೆಯ ಮೊತ್ತವನ್ನು ಲೆಕ್ಕಹಾಕಿ :

| | ರೂ. |
|---|---|
| ಮೂಲ ವೇತನ | 1,80,000 |
| ತುಟ್ಟಿ ಭತ್ಯೆಗಳು | 48,000 |
| ನಗರ ಪರಿಹಾರ ಭತ್ಯೆಗಳು | 2,880 |
| ಮನೆ ಬಾಡಿಗೆ ಭತ್ಯೆ ತಿಂಗಳಿಗೆ 6,000 ರೂ. ಗಳಂತೆ | 72,000 |
| ಚೆನ್ನೈನಲ್ಲಿ ಕೊಡುತ್ತಿದ್ದ ಬಾಡಿಗೆ ತಿಂಗಳಿಗೆ 7,000 ರೂ. ಗಳಂತೆ | 84,000 |
| ಜೀವ ವಿಮಾ ಕಂತಿನ ಸಂದಾಯ | 7,500 |
| ಮಾನ್ಯತೆ ಪಡೆದ ಭವಿಷ್ಯ ನಿಧಿಗೆ ಸಂದಾಯ | 8,000 |
| ಸಾರ್ವಜನಿಕ ಭವಿಷ್ಯ ನಿಧಿಗೆ ಸಂದಾಯ | 14,000 |
| ದೀರ್ಘಾವಧಿಯ ಬಂಡವಾಳ ಲಾಭ | 20,000 |
| ಇತರ ಆದಾಯ | 12,000 |
| ಇಂಜಿನಿಯರಿಂಗ್ ಓದುತ್ತಿರುವ ತನ್ನ ಮಗ ಹಾಗೂ ಮಗಳಿಗೆ ಟ್ಯೂಶನ್ ಫೀ ಸಂದಾಯ ಪ್ರತಿಯೊಬ್ಬರಿಗೆ 22,000 ರೂ. ಗಳಂತೆ | 44,000 |
| ಆತ ವೃತ್ತಿ ತೆರಿಗೆಗಾಗಿ ತಿಂಗಳಿಗೆ 200 ರೂ. ಸಂದಾಯ ಮಾಡಿದ್ದಾರೆ | 2,400 |

**21.** ಭಾರತೀಯ ರಿಸರ್ವ್ ಬ್ಯಾಂಕಿನ ವಿವೇಚನಾ ನಿಯಮಗಳಲ್ಲಿ ಇತ್ತೀಚೆಗೆ ಮಾಡಲಾಗಿರುವ ಬದಲಾವಣೆಗಳಿಂದ ಬ್ಯಾಂಕುಗಳಿಗೆ ಸಹಾಯವಾಗಿದೆ. ಆದರೆ, ಗ್ರಾಮೀಣ ಭಾರತದಲ್ಲಿರುವ ಕೃಷಿಕರಿಗೆ ಇವು ಸಮಸ್ಯೆಗಳನ್ನು ಹುಟ್ಟು ಹಾಕಿವೆ. — ನಿಮ್ಮ ಅಭಿಪ್ರಾಯವೇನು ?

**22.** IFCI, ICICI ಮತ್ತು IRCI ಗಳಂತಹ ಅಖಿಲ ಭಾರತ ಅವಧಿ ಹಣಕಾಸು ನೀಡಿಕೆ ಸಂಸ್ಥೆಗಳ ಕಾರ್ಯಗಳೇನು ?

**06/2**

# 2006

## COMMERCE AND ACCOUNTANCY

## Paper 2

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) Distinguish Line and Staff structures.

   (b) What are the basic features of Herzberg's Two-factor theory of motivation ?

   (c) What are the essential conditions required for Workers' Participation in Management ?

   (d) What is 'Absenteeism' ? Explain the causes of Absenteeism.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಶ್ರೇಣಿ ಮತ್ತು ಸಿಬ್ಬಂದಿ ರಚನೆಗಳ ವ್ಯತ್ಯಾಸ ತಿಳಿಸಿ.

(ಬಿ) ಹರ್ಜ್‌ಬರ್ಗ್‌ನ ಅಭಿಪ್ರೇರಣೆಯ ಎರಡು ಅಂಶಗಳ ಸಿದ್ಧಾಂತದ ಮೂಲ ಲಕ್ಷಣಗಳೇನು ?

(ಸಿ) ನಿರ್ವಹಣೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆಗೆ ಅಗತ್ಯವಾದ ಮೂಲ ಅಂಶಗಳು ಯಾವುವು ?

(ಡಿ) 'ಗೈರುಹಾಜರಾತಿ' ಎಂದರೇನು ? ಗೈರುಹಾಜರಾತಿಗೆ ಕಾರಣಗಳಿನ್ನು ? ವಿವರಿಸಿ.

## PART B

*10×10=100*

*Answer each question in about 100 words. Each question carries 10 marks.*

**2.** Distinguish Formal from Informal organization.

**3.** What are the sources of power in Bureaucracy ?

**4.** Explain the theory of motivation propounded by Abraham Maslow.

**5.** What are the basic features of Transactional Analysis ?

**6.** How is Organizational Efficiency different from Organizational Effectiveness ?

**7.** What are the forms and levels of participation in Workers' Participation in Management ?

**8.** "Collective Bargaining and Workers' Participation in Management do ***not*** go together." — Comment.

**9.** Distinguish "Fair Wage" from "Minimum Wage".

**10.** What are the causes of Labour Turnover in Indian Industry ?

**11.** What are the objectives of Executive Development Programmes ?

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಔಪಚಾರಿಕ ಮತ್ತು ಅನೌಪಚಾರಿಕ ಸಂಸ್ಥಾರಚನೆಯ ವ್ಯತ್ಯಾಸಗಳನ್ನು ತಿಳಿಸಿ.

**3.** ಅಧಿಕಾರಶಾಹಿಯಲ್ಲಿ ಅಧಿಕಾರಗಳು ಯಾವ ಮೂಲಗಳಿಂದ ಬರುತ್ತವೆ ?

**4.** ಅಬ್ರಾಹಂ ಮಾಸ್ಲೊ ಅವರಿಂದ ಪ್ರಚುರಗೊಳಿಸಲ್ಪಟ್ಟ ಅಭಿಪ್ರೇರಣಾ ಸಿದ್ಧಾಂತವನ್ನು ವಿವರಿಸಿ.

**5.** ವ್ಯವಹಾರಾತ್ಮಕ ವಿಶ್ಲೇಷಣೆಯ ಮೂಲ ಲಕ್ಷಣಗಳೇನು ?

**6.** 'ಸಾಂಸ್ಥಿಕ ದಕ್ಷತೆ'ಯು 'ಸಾಂಸ್ಥಿಕ ಪರಿಣಾಮಕಾರಿತ್ವ'ದಿಂದ ಹೇಗೆ ಭಿನ್ನ ?

**7.** ನಿರ್ವಹಣೆಯಲ್ಲಿ ಕಾರ್ಮಿಕರು ಭಾಗಿಯಾಗುವ ವಿವಿಧ ರೂಪಗಳು ಮತ್ತು ವಿವಿಧ ಹಂತಗಳು ಯಾವುವು ?

**8.** 'ಸಾಮೂಹಿಕ ಚೌಕಾಶಿ ಮತ್ತು ನಿರ್ವಹಣೆಯಲ್ಲಿ ಕಾರ್ಮಿಕರ ಸಹಭಾಗಿತ್ವ ಒಟ್ಟಾಗಿರಲು ಸಾಧ್ಯವಿಲ್ಲ." — ಈ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.

**9.** "ನ್ಯಾಯಯುತ ಮಜೂರಿ" ಮತ್ತು "ಕನಿಷ್ಠ ಮಜೂರಿ" ಇವೆರಡರ ವ್ಯತ್ಯಾಸ ತಿಳಿಸಿ.

**10.** ಭಾರತೀಯ ಕೈಗಾರಿಕಗಳಲ್ಲಿ ಕಾರ್ಮಿಕರು ತಿರುಗಿಬೀಳುವುದಕ್ಕೆ ಕಾರಣಗಳೇನು ?

**11.** ಕಾರ್ಯನಿರ್ವಾಹಕ ಅಭಿವೃದ್ಧಿ ಕಾರ್ಯಕ್ರಮದ ಧ್ಯೇಯಗಳೇನು ?

## PART C

*6×15=90*

*Answer each question in about 150 words. Each question carries 15 marks.*

**12.** List the theories of Trade Unionism. Distinguish 'Industrial Democracy Theory' from 'Revolutionary Theory'.

**13.** Briefly explain the functioning of the official machinery available in India for the settlement of industrial disputes.

**14.** Briefly explain the importance acquired by Child Labour and Human Rights violations in recent times in the ILO.

**15.** What are the causes of conflicts in Organizations ? What is the outcome of such conflicts ?

**16.** Define 'Organizational Structure'. What are 'Structural forms' ?

**17.** What is 'Organizational Change' ? Describe Organizational Change cycles.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಕಾರ್ಮಿಕ ಸಂಘಟನಾವಾದದ ಸಿದ್ಧಾಂತಗಳನ್ನು ಪಟ್ಟಿಮಾಡಿ. 'ಕೈಗಾರಿಕಾ ಪ್ರಜಾಪ್ರಭುತ್ವ ಸಿದ್ಧಾಂತ'ವು 'ಕ್ರಾಂತಿಕಾರಿ ಸಿದ್ಧಾಂತ'ದಿಂದ ಹೇಗೆ ಭಿನ್ನ ? ವಿವರಿಸಿ.

**13.** ಕೈಗಾರಿಕಾ ವಿವಾದಗಳನ್ನು ಇತ್ಯರ್ಥಪಡಿಸಲು ಭಾರತದಲ್ಲಿ ಲಭ್ಯವಿರುವ ಅಧಿಕೃತ ವ್ಯವಸ್ಥೆಯ ಕಾರ್ಯ ನಿರ್ವಹಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

**14.** ಇತ್ತೀಚಿನ ವರ್ಷಗಳಲ್ಲಿ ಬಾಲಕಾರ್ಮಿಕ ಸಮಸ್ಯೆ ಹಾಗೂ ಮನವ ಹಕ್ಕುಗಳ ಉಲ್ಲಂಘನೆಗಳು ILO ದಲ್ಲಿ ಪಡೆದಿರುವ ಪ್ರಾಮುಖ್ಯತೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

**15.** ಸಂಸ್ಥೆಗಳಲ್ಲಿ ಘರ್ಷಣೆಗಳು ಉಂಟಾಗಲು ಕಾರಣಗಳೇನು ? ಈ ಘರ್ಷಣೆಗಳ ಫಲಿತಾಂಶವೇನು ?

**16.** 'ಸಾಂಸ್ಥಿಕ ರಚನೆ'ಯನ್ನು ವಿವರಿಸಿ. 'ರಾಚನಿಕ ರೂಪಗಳು' ಎಂದರೇನು ?

**17.** 'ಸಾಂಸ್ಥಿಕ ಬದಲಾವಣೆ' ಎಂದರೇನು ? ಸಾಂಸ್ಥಿಕ ಬದಲಾವಣಾ ಚಕ್ರಗಳನ್ನು ನಿರೂಪಿಸಿ.

[Turn over

## PART D

*3×30=90*

*Answer any **three** of the following questions, each in about 300 words. Each question carries 30 marks.*

**18.** What is 'Conciliation' ? How is it different from 'Arbitration' ? Explain with relevant examples.

**19.** What are the aims and objectives of ILO ? Explain how the emergence of Business Process Outsourcing gained importance in ILO.

**20.** Explain the role of productivity in cost reduction in an organization.

**21.** How do you formulate organizational goals ? What are Primary and Secondary goals ?

**22.** What are the barriers to communication in organizations ? How do you overcome them ?

## ಭಾಗ D

*3×30=90*

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** 'ಸಂಧಾನ' ಎಂದರೇನು ? 'ಮಧ್ಯಸ್ಥಿಕೆ'ಯಿಂದ ಇದು ಹೇಗೆ ಭಿನ್ನ ? ಸೂಕ್ತವಾದ ಉದಾಹರಣೆಗಳೊಂದಿಗೆ ವಿವರಿಸಿ.

**19.** ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಯ ಗುರಿ ಮತ್ತು ಧ್ಯೇಯಗಳೇನು ? ವ್ಯವಹಾರ ಪ್ರಕ್ರಿಯೆಯಲ್ಲಿ ಹೊರಗುತ್ತಿಗೆ ಕೊಡುವುದರ ಆವಿರ್ಭಾವ ILO ದಲ್ಲಿ ಹೇಗೆ ಮಹತ್ವ ಪಡೆದಿದೆ ಎಂಬುದನ್ನು ವಿವರಿಸಿ.

**20.** ಒಂದು ಸಂಸ್ಥೆಯ ವೆಚ್ಚವನ್ನು ಕಡಿಮೆ ಮಾಡುವುದರಲ್ಲಿ ಉತ್ಪಾದಕತೆಯು ಯಾವ ರೀತಿಯ ಪಾತ್ರವಹಿಸುತ್ತದೆ ಎಂಬುದನ್ನು ವಿವರಿಸಿ.

**21.** ಸಂಸ್ಥಾ ಗುರಿಗಳನ್ನು ಹೇಗೆ ರೂಪಿಸುತ್ತೀರಿ ? 'ಪ್ರಾಥಮಿಕ ಗುರಿಗಳು', 'ದ್ವಿತೀಯ ಗುರಿಗಳು' ಎಂದರೇನು ?

**22.** ಸಂಸ್ಥೆಗಳಲ್ಲಿ ಸಂವಹನಕ್ಕೆ ಎದುರಾಗುವ ತಡೆಗಳು ಯಾವುವು ? ಇವುಗಳನ್ನು ನಿವಾರಿಸುವ ಬಗೆ ಹೇಗೆ ?